ದಿವಾಣಿ ನ್ಯಾಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಿತ್ತೂರ.

ದಿನಾಂಕಃ 14.07.2026 ರಂದು ಡಿ.ಡಬ್ಲ್ಯೂ-1ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ವಿ ಜಿ ಬಿ ವಕೀಲರಿಂದಃ**

1. ವಾದಿ ಮತ್ತು1 ನೇ ಪ್ರತಿವಾದಿಯವರ ಪರಿಚಯ ಇದೆ. ವಾದಿಯವರು ಮೂಲತಃ ಸೋಮವಾರ ಪೇಟೆ, ಕಿತ್ತೂರಿನವರು ಎಂದರೆ ಸರಿ. ಸೋಮವಾರ ಪೇಟೆಯಲ್ಲಿ ಅಂಗಡಿ ಮತ್ತು ಮನೆ ಇತ್ತು ಎಂದರೆ ಸರಿ. ವಾದಿಯವರಿಗೆ 4-5 ಜನ ಸಹೋದರರು ಎಂದರೆ ಸರಿ. ಸದರಿ ಸಹೋದರರು ಈಗಲೂ ಸೋಮವಾರ ಪೇಟೆಯಲ್ಲಿದ್ದಾರೆ ಎಂದರೆ ಸರಿ. ಗುರುವಾರ ಪೇಟೆಯಲ್ಲಿ ಅಂಗಡಿ ಪ್ರಾರಂಭಿಸಲು ಮನೆ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಮನೆ ನಮ್ಮ ಮನೆಗೆ ಹತ್ತಿರವಾಗಿದೆ ಎಂದರೆ ಸರಿ. ಸದರಿಯವರು ಖರೀದಿ ಮಾಡಿದ ಹಳೆ ಮನೆಯನ್ನು ಕೆಡವಿ ಹೊಸದಾಗಿ ಆರ್ ಸಿ ಸಿ ಮನೆ ಕಟ್ಟಿರುತ್ತಾರೆ ಎಂದರೆ ಸರಿ. ಹೊಸ ಮನೆಯಲ್ಲಿ 1 ನೇ ಪ್ರತಿವಾದಿ ಅಂಗಡಿ ನಡೆಸುತ್ತಿದ್ದ, ನಮ್ಮ ಮನೆಯಲ್ಲಿ ವಾದಿಯವರು ಬಾಡಿಗೆ ಅಂಗಡಿ ನಡೆಸುತ್ತಿದ್ದರು ಎಂದರೆ ಸರಿ. 10-15 ವರ್ಷಗಳವರೆಗೂ ವಾದಿ ನಮ್ಮ ಮನೆಯಲ್ಲಿ ಬಾಡಿಗೆ ಅಂಗಡಿ ನಡೆಸುತ್ತಿದ್ದರು ಎಂದರೆ ಸರಿ. 4-5 ವರ್ಷಗಳಿಂದ ವಾದಿಯವರು ಅಂಗಡಿ ವ್ಯಾಪಾರ ನಮ್ಮ ಮನೆಯಲ್ಲಿ ನಿಲ್ಲಿಸಿದ್ದಾರೆ ಎಂದರೆ ಸರಿ. ಹೊಸ ಮನೆಯಲ್ಲಿದ್ದ ಅಂಗಡಿಯನ್ನು ಭಿನ್ನಾಭಿಪ್ರಾಯ ಬಂದು 1 ನೇ ಪ್ರತಿವಾದಿಯವರು ಲಾಕ್ ಮಾಡಿರುತ್ತಾರೆ

ಎಂದರೆ ಸರಿ. ಸದರಿ ಮನೆಯ ಅಂಗಡಿಯ ಹಿಂದೆ ಇರುವ ಮನೆಯಲ್ಲಿ 1 ನೇ ಪ್ರತಿವಾದಿ ವಾಸ ಮಾಡುತ್ತಾರೆ ಎಂದರೆ ಸರಿ. ಸದರಿ 1 ನೇ ಪ್ರತಿವಾದಿ ಹೊಸ ಜಾಗೆ ಖರೀದಿಸಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ಸದರಿ ಹೊಸ ಮನೆಯ ಖರೀದಿ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇಲ್ಲ.

**(ಈ ಹಂತದಲ್ಲಿ 1 ನೇ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು).**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಮಹಮ್ಮದ ಅಲಿ ನಾಯಕ)
ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕಿತ್ತೂರ.